






# ಮೈಸೂರಿನಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ

ಸ್ವಾಮಿ ವಿವೇಕಾನಂದರ ಚಿಕಾಗೋ ಉಪನ್ಯಾಸಗಳ ೧೨೫ನೇ ವಾರ್ಷಿಕೋತ್ಸವ ಆಚರಣೆಯ ಅಂಗವಾಗಿ ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಮೈಸೂರು ವಿಶ್ವವಿದ್ಯಾನಿಲಯದ ಸಂಯೋಗದೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಸೆಪ್ಟೆಂಬರ್ ೨೦ ಹಾಗೂ ೨೧ರಂದು ಎರಡು ದಿನಗಳ ಕಾಲ ರಾಷ್ಟ್ರೀಯ ವಿಚಾರ ಸಂಕಿರಣ ವನ್ನು ನೆರವೇರಿಸಿತು. ಕಳೆದ ಒಂದು ವರ್ಷದ ಅವಧಿಯಲ್ಲಿ ಮೈಸೂರು ಆಶ್ರಮವು ಚಿಕಾಗೋ ಉಪನ್ಯಾಸಗಳ ೧೨೫ನೇ ವಾರ್ಷಿಕೋತ್ಸವವನ್ನು ಹಲವಾರು ವಿಚಾರ ಸಂಕಿರಣ, ಕಾರ್ಯಾಗಾರ ಹಾಗೂ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳೊಂದಿಗೆ ನಡೆಸುತ್ತಿದ್ದು, ಇದರ ಸಮಾರೋಪ ಸಮಾ ರಂಭದ ರೂಪದಲ್ಲಿ ಈ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು .

ಕರ್ನಾಟಕದ ರಾಮಕೃಷ್ಣ ಆಶ್ರಮಗಳು ಹಾಗೂ ಭಾವಪ್ರಚಾರ ಕೇಂದ್ರಗಳಿಂದ ಸುಮಾರು ೩೦೦ ಮಂದಿ ನೊಂದಾಯಿಸಲ್ಪಟ್ಟ ಪ್ರತಿನಿಧಿ ಗಳಲ್ಲದೆ, ಮೈಸೂರಿನ ೧೮ ಕಾಲೇಜುಗಳಿಂದ ಬಂದ ೭೫೦ ಮಂದಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಗೂ ಸುಮಾರು ೧೦೦ ಮಂದಿ ಭಕ್ತರು, ವಿಶೇಷ ಆಹ್ವಾನಿತರು – ಹೀಗೆ ಸುಮಾರು ೧೨೦೦ ಮಂದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿವಿಧ ಉಪನ್ಯಾಸಗಳು, ವೀಡಿಯೋ ಪ್ರದರ್ಶನ, ಸಂಗೀತ ಸಂಧ್ಯೆ ಮುಂತಾದ ಕಾರ್ಯಕ್ರಮಗಳು ನೆರೆದ ಯುವಕ–ಯುವತಿಯರ ಗಮನ ಸೆಳೆದವು.

ದಿನಾಂಕ ೨೦ರಂದು ನಡೆದ ಉದ್ಘಾಟನಾ ಸಮಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್ ಅವರು ರಾಷ್ಟ್ರೀಯ ವಿಚಾರ ಸಂಕಿರಣವನ್ನು ದೀಪ ಬೆಳಗಿಸಿ ಉದ್ಘಾಟಿಸಿ ದರು. ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ನಾಡೋಜ ಪ್ರೊ. ಹಂಪನಾ ಅವರು ವಿಶೇಷ ಭಾಷಣ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅಧ್ಯಕ್ಷ ಭಾಷಣ ಮಾಡಿದರು.

ಮೊದಲ ಗೋಷ್ಠಿಯಲ್ಲಿ ಮಾಯಾವತಿ ಅದ್ವೈತ ಆಶ್ರಮದ ಅಧ್ಯಕ್ಷ ರಾದ ಸ್ವಾಮಿ ಶುದ್ಧಿದಾನಂದಜೀ ಮಹಾರಾಜ್ ಅವರು, **‘ಚಿಕಾಗೋ ಸರ್ವ ಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಪ್ರಸ್ತುತಪಡಿಸಿದ ಹಿಂದೂಧರ್ಮ’** ಎಂಬ ವಿಷಯದ ಬಗ್ಗೆ ಹಾಗೂ ಶ್ರೀ ಚಕ್ರವರ್ತಿ ಸೂಲಿ ಬೆಲೆಯವರು **‘ವಿಶ್ವಗುರು ಭಾರತದ ನವನಿರ್ಮಾಪಕ ಸ್ವಾಮಿ ವಿವೇಕಾ ನಂದ’** ಎಂಬ ವಿಷಯಗಳ ಬಗ್ಗೆ ಮಾತನಾಡಿದರು.

ಎರಡನೇ ಗೋಷ್ಠಿಯಲ್ಲಿ ಕಾನ್ಪುರ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷ ರಾದ ಸ್ವಾಮಿ ಆತ್ಮಶ್ರದ್ಧಾನಂದಜಿಯವರು **‘ಚಿಕಾಗೋದಲ್ಲಿ ಪ್ರಕಟಗೊಂಡ ಸ್ವಾಮಿ ವಿವೇಕಾನಂದರ ಶ್ರೇಷ್ಠತೆ’** ಎಂಬ ವಿಷಯದ ಬಗ್ಗೆ, ಪ್ರೊ. ಸಿ.ಪಿ.ಕೆ. ಅವರು **‘ಧಾರ್ಮಿಕ ಇತಿಹಾಸದ ಹಿನ್ನೆಲೆಯಲ್ಲಿ ವಿಶ್ವಧರ್ಮ ಸಮ್ಮೇಳನ ಹಾಗೂ ಸ್ವಾಮಿ ವಿವೇಕಾನಂದರ ಔಚಿತ್ಯ’** ಎಂಬ ವಿಷಯದ ಬಗ್ಗೆ, ಹಾಗೂ ಶ್ರೀ ಎಸ್.ಎಸ್. ರಮೇಶ್ ಅವರು **‘ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಭಾರತದ ಪುನರುತ್ಥಾನ’** ಎಂಬ ವಿಷಯದ ಬಗ್ಗೆ ಮಾತನಾಡಿದರು.

ಸೆಪ್ಟೆಂಬರ್ ೨೧ರಂದು ನಡೆದ ಮೂರನೇ ಗೋಷ್ಠಿಯಲ್ಲಿ ಇಲ್ಯುಮಿನ್ ನಾಲೇಜ್ ರಿಸೋರ್ಸಸ್ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಶ್ರೀನಿವಾಸ ವೆಂಕಟರಾಮನ್ ಅವರು **‘ಯುವಶಕ್ತಿಯನ್ನು ರಾಷ್ಟ್ರೀಯ ಶಕ್ತಿಯನ್ನಾಗಿಸಿ ಪರಿವರ್ತಿಸುವ ಬಗೆ’** ಎಂಬ ವಿಷಯದ ಬಗ್ಗೆ ಹಾಗೂ ಬೆಂಗಳೂರು ರಾಮ ಕೃಷ್ಣ ಮಠದ ಸ್ವಾಮಿ ಮಂಗಳನಾಥಾನಂದಜಿ **‘ಅಮೆರಿಕದಲ್ಲಿ ಕಂಡು ಬಂದ ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಶಕ್ತಿಯ ಅಭಿವ್ಯಕ್ತಿ’** ಎಂಬ ವಿಷ ಯದ ಬಗ್ಗೆ ಮಾತನಾಡಿದರು. ಎರಡನೇ ಗೋಷ್ಠಿಯಲ್ಲಿ ಊಟಿ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜಿಯವರು **‘ಶ್ರೀರಾಮ ಕೃಷ್ಣರ ಆಧ್ಯಾತ್ಮಿಕ ಶಕ್ತಿಯ ಮೂರ್ತಸ್ವರೂಪ ಸ್ವಾಮಿ ವಿವೇಕಾನಂದರು’** ಎಂಬ ವಿಷಯದ ಬಗ್ಗೆ ಹಾಗೂ ಕರ್ನಾಟಕ ಉನ್ನತ ಶಿಕ್ಷಣ ಸಮಿತಿ, ಬೆಂಗ ಳೂರು ಇದರ ವಿಶೇಷ ಅಧಿಕಾರಿ ಡಾ. ತೇಜಸ್ವಿನಿ ಬಿ. ಯಕ್ಕುಂದಿಮಠ ಅವರು **‘ಮಹಿಳೆಯರ ಏಳಿಗೆಯೇ ಭಾರತದ ಪುನರುತ್ಥಾನಕ್ಕೆ ಸೋಪಾನ : ಸ್ವಾಮಿ ವಿವೇಕಾನಂದ’** ಎಂಬ ವಿಷಯದ ಬಗ್ಗೆ ಮಾತನಾಡಿದರು.

ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾ ನಿಲಯದ ಉಪಕುಲಪತಿಗಳಾದ ಪ್ರೊ. ಎಸ್. ವಿದ್ಯಾಶಂಕರ್ ಅವರು ಮಾತನಾಡಿದರು. ಬಳಿಕ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪರಮ ಪೂಜ್ಯ ಡಾ. ನಿರ್ಮಲನಾಥಾನಂದ ಮಹಾಸ್ವಾಮೀಜಿಯವರು ಆಶೀ ರ್ವಚನ ನೀಡಿದರು. ಸ್ವಾಮಿ ಮುಕ್ತಿದಾನಂದಜಿಯವರು ಅಧ್ಯಕ್ಷ ಭಾಷಣ ಮಾಡಿದರು. ಸಂಜೆ ೪ರಿಂದ ೬ರ ವರೆಗೆ ಬೆಂಗಳೂರಿನ ಪ್ರಸಿದ್ಧ ಸಂಗೀತ ನಿರ್ದೇಶಕ ಶ್ರೀ ಪ್ರವೀಣ್ ಡಿ. ರಾವ್ ಹಾಗೂ ತಂಡದವರಿಂದ **‘ವಿವೇಕ ನಮನ ಸಂಗೀತ’** ಎಂಬ ವಿಶೇಷ ಸಂಗೀತ ಕಾರ್ಯಕ್ರಮದ ನಡೆಯಿತು.

ಯುವಕ–ಯುವತಿಯರೇ ಅಧಿಕವಾಗಿದ್ದ ಈ ವಿಚಾರ ಸಂಕಿರಣದಲ್ಲಿ ಸ್ವಾಮಿ ವಿವೇಕಾನಂದರ ವಿಚಾರಧಾರೆ, ರಾಷ್ಟ್ರೀಯತೆ ಹಾಗೂ ಯುವ ಶಕ್ತಿಯ ಬೆಳವಣಿಗೆ ಕುರಿತ ಚಿಂತನೆಗಳು ಹೆಚ್ಚಾಗಿ ನಡೆದಿದ್ದು, ಭವಿಷ್ಯ ಭಾರತದ ನಿರ್ಮಾಪಕರಾದ ಯುವಜನತೆಗೆ ಸ್ಫೂರ್ತಿ, ಉತ್ಸಾಹ ತುಂಬು ವಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದುದು ಗಮನಾರ್ಹವಾಗಿತ್ತು .









Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020